ದಿನಾಂಕಃ 26-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ರವರ ಪರ ವಕೀಲರಿಂದ,

1) ನಾನು ಕೂಲಿ ಕೆಲಸ ಮಾಡುತ್ತೇನೆ. ಸರ್ವೇ ನಂ. 342 ರಲ್ಲಿ 1 ಎಕರೆ ಜಮೀನುಕರಾರು ಪತ್ರ ಆಗಿದ್ದು, ಸದರಿ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಹಲಗಮ್ಮ ರವರ ಜಮೀನು ಪಶ್ಚಿಮಕ್ಕೆ ರಾಜನಾಯಕ ರವರ ಜಮೀನು ಉತ್ತರಕ್ಕೆ ಪುಟ್ಟಮ್ಮ ರವರ ಜಮೀನು ಮತ್ತು ದಕ್ಷಿಣಕ್ಕೆ ಪ್ರತಿವಾದಿಗಳ ಜಮೀನು ಇರುತ್ತದೆ. ಕರಾರು ಪತ್ರದಲ್ಲಿ ಕ್ರಯ ಪ್ರಡಿಫಲ 10,80,000/- ಆಗಿದ್ದು, ಮುಂಗಡ ಹಣವಾಗಿ ರೂ. 8,00,000/- ಹಣವನ್ನು ಪ್ರತಿವಾದಿಗಳಿಗೆ ನೀಡಿರುತ್ತೇನೆ. ನನಗೆ ವ್ಯವಸಾಯ ಜಮೀನು ಯಾವುದೇ ಇರುವುದಿಲ್ಲ. ನನಗೆ ಕೂಲಿಯಿಂದ ಪ್ರತಿದಿನ 500 ರೂಪಾಯಿ ಆದಾಯ ಇರುತ್ತದೆ. ನನಗೆ ನಿವೇಶನ ಇದ್ದು, ಅದನು ಮಾರಾಟ ಮಾಡಿರುತ್ತೇನೆ. ನಾನು ನಿವೇಶನ ಮಾರಾಟ ಮಾ ಡಿದ್ದೇನೆ ಎಂದುತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ಒಡೆವೆಗಳನ್ನು ಮಾರಾಟ ಮಾಡಿರು ವಬಗ್ಗೆ ದಾಖಲೆ ಇರುತ್ತದೆ.

2) 2 ನೇ ಪ್ರತಿವಾದಿಯ ತಂದೆಗೆ ಒಟ್ಟು ನಾಲ್ಕು ಜನ ಮಕ್ಕಳು. ಕರಾರು ಪತ್ರಕ್ಕೆ ಹೆಣ್ಣು ಮಕ್ಕಳ ಸಹಿಯನ್ನು ಪಡೆದುಕೊಂಡಿರುವುದಿಲ್ಲ. 2 ನೇ ಪ್ರತಿವಾದಿ ಸಹೋದರರು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ359/2022 ರಂತೆ ವಿಭಾಗ ದಾವೆ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-01 ಕರಾರು ಪತ್ರವನ್ನು ತಿಮ್ಮೇಗೌಡ ವಕೀಲರು ತಯಾರು ಮಾಡಿರುತ್ತಾರೆ. ನಿಪಿ-01 ಕರಾರು ಪತ್ರವನ್ನು

ತಯಾರು ಮಾಡುವ ಸಮಯದಲ್ಲಿ ಲೊಕೇಶನಾಯಕ ಮತ್ತು ನಾಗರಾಜು ಇದ್ದರು.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ